# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1049(1134) |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲಾ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ವೃಂದದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ/ಸ್ವಯಂಚಾಲಿತ ವೇತನ ಬಡ್ತಿ/ ಬಡ್ತಿ ಇತರೆ ಸಮಯದಲ್ಲಿ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಆದೇಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶಾಲಾ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ವೃಂದದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ/ಸ್ವಯಂಚಾಲಿತ ವೇತನ ಬಡ್ತಿ/ ಬಡ್ತಿ ಇತರೆ ಸಮಯದಲ್ಲಿ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು ಈ ಕೆಳಕಂಡ ನಿಯಮ / ಆದೇಶಗಳನ್ವಯ ಪಡೆದು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.<br><br>1. ಕರ್ನಾಟಕ ಸರ್ಕಾರಿ(ಕಾಲಬದ್ಧ ಮುಂಬಡ್ತಿ) ನಿಯಮಗಳು 1983ರ ನಿಯಮ 3(ಆ)ರಲ್ಲಿ ಸರ್ಕಾರಿ ನೌಕರರ ಸೇವಾ ದಾಖಲೆ ತೃಪ್ತಿಕರವಾಗಿದ್ದಲ್ಲಿ ಅವರಿಗೆ ಅನ್ವಯಿಸುವ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಬಡ್ತಿಗೆ ಅರ್ಹರಿರತಕ್ಕದ್ದು ಎಂದು ನಿರ್ದಿಷ್ಟಪಡಿಸಲಾಗಿರುತ್ತದೆ.<br><br>2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 5 ಎಸ್.ಆರ್.ಪಿ 84, ದಿನಾಂಕ:08.10.1985 ಕ್ರಮ ಸಂಖ್ಯೆ: 5(3) ರ ಅನುಸಾರ ಬಡ್ತಿಗೆ ಪರಿಗಣಿಸುವ ದಿನಾಂಕದ ಹಿಂದಿನ 05 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲಿಸಿ ಬಡ್ತಿಗೆ ಅರ್ಹತೆ, ಸೂಕ್ತತೆಯನ್ನು ನಿರ್ಧರಿಸಬೇಕಾಗುತ್ತದೆ(Confidential Reports for a period of five years immediately preceding the date of consideration of his suitability for promotion should be examined). |

| | | |
|---|---|---|
| ಆ) | ಹಾಗಿದ್ದಲ್ಲಿ, ವ್ಯವಸ್ಥಿತವಾಗಿ ಹಾಗೂ ಸಮರ್ಪಕವಾಗಿ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ನಿರ್ವಹಿಸದೆ ಇರುವುದರಿಂದ ಸಮಯೋಚಿತವಾಗಿ ಸಲ್ಲಿಸಲು ಕಷ್ಟ ಸಾಧ್ಯವಾಗುತ್ತಿರುವ ಕಾರಣ ಶಿಕ್ಷಕ ವೃಂದದವರಿಗೆ ಪರಿಗಣಿಸುವಂತೆಯೇ ಸಂಬಂಧಪಟ್ಟ ಅಧಿಕಾರಿಗಳ ವಿಶೇಷ ವರದಿ ದೃಢೀಕರಣವನ್ನು ಪರಿಗಣಿಸುವ ಕುರಿತು ಸರ್ಕಾರದ ನಿಲುವೇನು: (ಮಾಹಿತಿ ನೀಡುವುದು) | ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು)(ತಿದ್ದುಪಡಿ) ನಿಯಮಗಳು, 2002ರ ನಿಯಮ 7ಎ ರನ್ವಯ ಸರ್ಕಾರಿ ನೌಕರರ ಕಾರ್ಯನಿರ್ವಹಣಾ ವರದಿಗಳು ಲಭ್ಯವಿರದ ನಿರ್ದಿಷ್ಟ ಅವಧಿಗೆ ಸಕ್ಷಮ ನೇಮಕಾತಿ ಪ್ರಾಧಿಕಾರವು ಇಚ್ಛಿಸಿದ್ದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಸಂಬಂಧಪಟ್ಟ ನೌಕರ, ವರದಿ ಪ್ರಾಧಿಕಾರ, ಪುನರಾವಲೋಕನ ಪ್ರಾಧಿಕಾರ ಮತ್ತು ಅಂಗೀಕಾರ ಪ್ರಾಧಿಕಾರಗಳಿಗೆ ವಿಶೇಷ ವರದಿ ಸಿದ್ಧಪಡಿಸಿ ಸಲ್ಲಿಸುವಂತೆ ನಿರ್ದೇಶಿಸಲು ಅವಕಾಶವಿದೆ. ಈ ನಿಯಮದಲ್ಲಿನ ಅವಕಾಶದಂತೆ ಸಂದರ್ಭಾನುಸಾರ ಕ್ರಮವಹಿಸಲಾಗುತ್ತಿದೆ. |
| ಇ) | ವಿಶೇಷ ವರದಿ ಪರಿಗಣಿಸುವುದಾದಲ್ಲಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆಯೇ; ಯಾವ ರೀತಿ ನಿರ್ದೇಶನ ನೀಡಲಾಗಿದೆ; (ಮಾಹಿತಿ ನೀಡುವುದು) | |
| ಈ) | ವಿಶೇಷ ವರದಿ ಪರಿಗಣಿಸದೆ ಇದ್ದಲ್ಲಿ ಕಾರಣಗಳೇನು; ಒಂದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಅಧಿಕಾರಿ/ನೌಕರರುಗಳಿಗೆ ತಾರತಮ್ಯ ಮಾಡಿದಂತಾಗುವುದಿಲ್ಲವೇ; ಈ ಕುರಿತು ಸ್ಪಷ್ಟ ಅಭಿಪ್ರಾಯ ನೀಡುವುದು; | |
| ಉ) | ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆಯಾ ವರ್ಷದಲ್ಲಿ ಬರೆಯುವ ಮತ್ತು ನಿರ್ವಹಿಸುವ ಕುರಿತು ಸರ್ಕಾರದ ಆದೇಶಗಳಿದ್ದಾಗ್ಯೂ ಸಹ ಸಮಯೋಚಿತವಾಗಿ ನಿರ್ವಹಣೆ ಮಾಡುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು: ವ್ಯವಸ್ಥಿತವಾಗಿ ನಿರ್ವಹಣೆ ಮಾಡದೆ ಇದ್ದಲ್ಲಿ, ಕಾರಣಗಳೇನು; ಅಂತಹ ಅಧಿಕಾರಿ/ನೌಕರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಮಾಹಿತಿ ನೀಡುವುದು) | ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆಯಾ ವರ್ಷದಲ್ಲಿ ಬರೆಯುವುದು ಮತ್ತು ನಿರ್ವಹಿಸುವುದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.<br><br>ಸಕಾಲದಲ್ಲಿ ಅಗತ್ಯ ಕ್ರಮವಹಿಸುವಂತೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ. |

**ಸಂಖ್ಯೆ:**ಇಪಿ 121 ಎಸ್ ಟಿಬಿ 2025

**( ಎಸ್. ಮಧು ಬಂಗಾರಪ್ಪ )**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.